(ಆ ಓವರ್‌ಗಳಲ್ಲಿ 22 ರನ್‌ಗಳನ್ನು ಮಾತ್ರ ಭಾರತ ನೀಡಿತೆನ್ನುವುದು ಹೈಲೈಟ್). ಅದಕ್ಕೂ ಮೊದಲು ಬ್ಯಾಟಿಂಗ್ ಮಾಡಿದಾಗ, ಕೊಹ್ಲಿ 59 ಎಸೆತಗಳಲ್ಲಿ 76 ರನ್‌ಗಳನ್ನು ಗಳಿಸಿದರು. ಅದಕ್ಕೂ ಹಿಂದಿನ ಏಳು ಪಂದ್ಯಗಳಲ್ಲಿ ಅವರು ಗಳಿಸಿದ್ದ ಒಟ್ಟು ಸ್ಕೋರ್ ಕೇವಲ 75. ಬಾಂಗ್ಲಾದೇಶದ ವಿರುದ್ಧ 'ಸೂಪರ್‌ಎಯ್ಟ್' ಪಂದ್ಯದಲ್ಲಿ 28 ಎಸೆತಗಳಲ್ಲಿ 37 ರನ್ ಹೊಡೆದದ್ದೇ ಗರಿಷ್ಠ ಎನಿಸಿಕೊಂಡಿತ್ತು. ಅಮೆರಿಕದ ನಿಧಾನಗತಿಯ ಪಿಚ್‌ಗಳು ಅವರ ಐಪಿಎಲ್ ಮನಃಸ್ಥಿತಿಗೆ ಸಂಪೂರ್ಣ ವಿರುದ್ಧವಾಗಿದ್ದವು. ಚೆಂಡು ಬ್ಯಾಟ್‌ಗೆ ಸುಲಭವಾಗಿ ಬಾರದ ಸಂದರ್ಭದಲ್ಲಿ ಹೀಗೆ ಆಗುವುದು ಸಹಜ.

ಬಾರ್ಬಡೋಸ್ ಕಡೆಗೆ ಭಾರತ ಪ್ರವಾಸ ಮಾಡಿದ ಮೇಲೆ ಕೊಹ್ಲಿ ಪಾದದ ಚಲನೆ ಹಳೆಯ ಲಯಕ್ಕೆ ಮರಳುವ ನಿರೀಕ್ಷೆಯಂತೂ ಇತ್ತು. ಅದು ನಿಜವಾದದ್ದು ಫೈನಲ್‌ನಲ್ಲಿ.

ಆತ್ಮವಿಶ್ವಾಸ, ಅಹಮಿಕೆ, ಸ್ಟೈಲ್ ಸ್ಟೇಟ್‌ಮೆಂಟ್, ದಾಳಿಕೋರತನ, ಇವೆಲ್ಲವುಗಳ ಮಿಶ್ರಣದಂತೆ ಕಾಣುವ ಕೊಹ್ಲಿ ಕುರಿತು ಇತ್ತೀಚೆಗೆ 'ಸ್ವಾರ್ಥಿ' ಎನ್ನುವ ಟೀಕೆಗಳೂ ಕೇಳಿಬಂದಿದ್ದವು. ಆಟದಲ್ಲಿನ ಅವರ ಧೋರಣೆ ಇಂತಹ ಅಭಿಪ್ರಾಯ ಮೂಡಲು ಕಾರಣವಿದ್ದರೂ, ಅವರು ಟ್ವೆಂಟಿ20 ವಿಶ್ವಕಪ್ ಎತ್ತಿಹಿಡಿದ ದಿನ ಆಡಿದ ಮಾತು ಒಂದು ಬಗೆಯಲ್ಲಿ ನೀತಿ ಪಾಠದ ಅಧ್ಯಾಯದಂತೆ ಇತ್ತು.

'ನಾನು ತಲೆಬಾಗಿ ಆಡಿದೆ. ಟೂರ್ನಿ ಶುರುವಾದಾಗ ಒತ್ತಡದಲ್ಲಿ ಇದ್ದೆ. ಮನಸ್ಸು ಸರಿಯಿಲ್ಲ ಎನ್ನುವುದು ಗೊತ್ತಿತ್ತು. ಆದರೂ ತಲೆಬಾಗಿದೆ. ಬೌಲರ್‌ಗಳಿಗೆ ಕೊಡಬೇಕಾದ ಗೌರವ ಕೊಟ್ಟೆ.





**ಭಲೇ ಜೋಡಿ:** ಗೆಲುವಿನೊಂದಿಗೆ ಅಂತರರಾಷ್ಟ್ರೀಯ ಚುಟುಕು ಕ್ರಿಕೆಟ್‌ಗೆ ವಿದಾಯ ಹೇಳಿದ ವಿರಾಟ್ ಕೊಹ್ಲಿ, ರೋಹಿತ್ ಶರ್ಮ

ಅದೃಷ್ಟವಶಾತ್ ಫೈನಲ್‌ನಲ್ಲಿ ನಮಗೆ ಸಿಹಿ ಸುದ್ದಿ ಸಿಕ್ಕಿತು' ಎಂಬರ್ಥದ ಅವರ ಮಾತಿನಲ್ಲಿ ವಿನಯ ಬೆರೆತಿತ್ತು. ಅವರ ಮುಖದಲ್ಲಿ ಆಗ ವಿನೀತ ಭಾವವಿತ್ತು. ಸದಾ ಎದೆ ಸೆಟೆದು ನಿಲ್ಲುವ ಅವರು, ಆ ದಿನ ತುಸು ದಣಿದ ಹುಡುಗನಂತೆ ಕಾಣುತ್ತಿದ್ದರು. ಕಣ್ಣಲ್ಲಿ ನೀರ ಪಸೆ ಇತ್ತು.

ಈ ಸಲದ ಚುಟುಕು ವಿಶ್ವಕಪ್ ಕ್ರಿಕೆಟ್‌ನಲ್ಲಿ ಭಾರತ ವಿಶ್ವ ಚಾಂಪಿಯನ್ ಆಗಿ ಹೊಮ್ಮಿದ್ದರಲ್ಲಿ ಸಾಂಘಿಕ ಹೋರಾಟವೊಂದರ ದಿವ್ಯ ಕಥನ ಎದ್ದುಕಾಣುತ್ತದೆ. ರೋಹಿತ್ ಶರ್ಮ ಹಾಗೂ ರವೀಂದ್ರ ಜಡೇಜಾ ಪಾಲಿಗೂ ಅದು ಕೊನೆಯ ಅಂತರರಾಷ್ಟ್ರೀಯ ಚುಟುಕು ಪಂದ್ಯವಾಗಿತ್ತು. ರೋಹಿತ್ ಪಿಚ್‌ನ ಮಣ್ಣಿನ ಹುಡಿ ಎತ್ತಿಕೊಂಡು ಬಾಯಿಗೆ ಹಾಕಿಕೊಂಡರು. ಪುಟ್ಟ ಮಗಳನ್ನು ಭುಜದ ಮೇಲೆ ಹೊತ್ತು ಸುತ್ತುತ್ತಾ ಇನ್ನೊಂದು ತಲೆಮಾರಿನ ಆಟಗಾರರಿಗೆ ಸಂಭ್ರಮದ ಬ್ಯಾಟನ್ ದಾಟಿಸಿದರು.

ಐಪಿಎಲ್‌ನಲ್ಲಿ 'ಮುಂಬೈ ಇಂಡಿಯನ್ಸ್' ತಂಡದ ನಾಯಕತ್ವದ ನೊಗವನ್ನು ನಾಜೂಕಾಗಿ ಅವರ ಹೆಗಲಿನಿಂದ ಎತ್ತಿ ಹಾರ್ದಿಕ್ ಪಾಂಡ್ಯ ಹೆಗಲಿಗೆ ಇದೇ ವರ್ಷ ವರ್ಗಾಯಿಸಲಾಗಿತ್ತು. ಅದನ್ನು ರೋಹಿತ್ ತಲೆಯೊಳಗೆ ಇಳಿಸಿಕೊಂಡಿರಲಿಲ್ಲ ಎನ್ನುವುದಕ್ಕೆ, ಫೈನಲ್ ಪಂದ್ಯದಲ್ಲಿ ಕೊನೆಯ ಓವರ್ ಬೌಲ್ ಮಾಡುವ ಜವಾಬ್ದಾರಿಯನ್ನು ಅವರು ಹಾರ್ದಿಕ್‌ಗೆ ನೀಡಿದ್ದೇ ಸಾಕ್ಷಿ.

ಈ ಸಲ ಕಪ್ ಎತ್ತಿಹಿಡಿದಾಗ ಬಹುತೇಕರ ಕಣ್ಣುಗಳಲ್ಲಿ ತೇವವಿತ್ತು. ಹಾರ್ದಿಕ್ ಪಾಂಡ್ಯ ಮಗುವಿನಂತೆ ಅತ್ತರು. ಇಬ್ಬಿಬ್ಬರು ದೈತ್ಯರು ವಿಶ್ವಮಟ್ಟದ ಪಂದ್ಯಗಳಲ್ಲಿ ಇನ್ನು ಚುಟುಕು ಕ್ರಿಕೆಟ್ ಆಡುವುದಿಲ್ಲ ಎನ್ನುವ ವಿಷಾದದ ಲೇಪವೊಂದು ಸಂಭ್ರಮದ ಕ್ಷಣದ ಮೇಲೆ ಇದ್ದುದಕ್ಕೆ ಹಲವು ಚಿತ್ರಿಕೆಗಳು ಪುಷ್ಟಿ ಕೊಟ್ಟವು.

ಗಂಭೀರವದನರಾದ ರಾಹುಲ್ ದ್ರಾವಿಡ್ ಅವರಿಗೂ ತರಬೇತುದಾರರಾಗಿ ಅದು ಕೊನೆಯ ಪಂದ್ಯ. ಅವರೂ ಕಣ್ಣೀರಿಟ್ಟ ಮಕ್ಕಳ ನಡುವೆ ಭಾವುಕ ಮನೆಯೊಡೆಯನ ತರಹ ಕಂಡರು. ಮಕ್ಕಳ ಜೊತೆ ಬೆರೆತು ಅವರೂ ಮಗುವಾದರು.

'ರೋಹಿತ್ ಶರ್ಮ ಅವರಲ್ಲಿ ನೀವು ಕಂಡ ಮರೆಯಲಾಗದ ಗುಣ ಯಾವುದು' ಎಂಬ ಪ್ರಶ್ನೆಗೆ ಅವರು ಕೊಟ್ಟ ಉತ್ತರ ಮನ ಮಿಡಿಯುವ ಹಾಗಿತ್ತು: 'ರೋಹಿತ್ ಒಳ್ಳೆಯ ಬ್ಯಾಟ್ಸ್‌ಮನ್, ತಣ್ಣಗಿನ ನಾಯಕ ಎನ್ನುವುದು ಎಲ್ಲರಿಗೂ ಗೊತ್ತು. ಎಲ್ಲಕ್ಕೂ ಮೀರಿ ಅವನೊಬ್ಬ ತುಂಬಾ ಒಳ್ಳೆಯ ಮನುಷ್ಯ. ನನ್ನನ್ನು ಬಹಳ ಚೆನ್ನಾಗಿ ನಡೆಸಿಕೊಂಡ.'

2007ರಲ್ಲಿ ಭಾರತವು ಟ್ವೆಂಟಿ20 ವಿಶ್ವಕಪ್ ಶುರುವಾದಾಗ, ಮೊದಲ ಆವೃತ್ತಿಯಲ್ಲೇ ಕಪ್ ಗೆದ್ದಿತ್ತು. ಆಗ ಇಂಗ್ಲೆಂಡ್ ವಿರುದ್ಧ ಯುವರಾಜ್ ಸಿಂಗ್ ಆರು ಎಸೆತಗಳಲ್ಲಿ ಆರನ್ನೂ ಸಿಕ್ಸರ್‌ಗೆ ಎತ್ತಿದ್ದರು. ಆಗಿನ್ನೂ ಯುವಕನಾಗಿದ್ದ ಬೌಲರ್ ಕ್ರಿಸ್‌ಬ್ರಾಡ್, ಆಮೇಲೆ ಅದೇ ತಂಡದ ಪರವಾಗಿ ಟೆಸ್ಟ್ ಕ್ರಿಕೆಟ್‌ನಲ್ಲಿ 600ಕ್ಕೂ ಹೆಚ್ಚು ವಿಕೆಟ್‌ಗಳನ್ನು ಪಡೆದ ಬೌಲರ್ ಆಗಿ ಬೆಳೆದದ್ದರಲ್ಲಿ ಆ ಇನಿಂಗ್ಸ್ ಕಲಿಸಿರಬಹುದಾದ ಪಾಠ ಇದ್ದೇ ಇರುತ್ತದೆ. ಆಟ ಹೇಗೆಲ್ಲ ಪಾಠವೂ ಆಗುತ್ತದೆನ್ನುವುದಕ್ಕೆ ಇದು ಉದಾಹರಣೆಯಷ್ಟೆ.

ಈ ಸಲದ ಚುಟುಕು ಕ್ರಿಕೆಟ್‌ನ ವಿಶ್ವಕಪ್ ಒಂದು ಬಗೆಯಲ್ಲಿ ಬೌಲರ್‌ಗಳಿಗೆ ಹಬ್ಬವಾಗಿತ್ತು. ಅಮೆರಿಕದ ಪಿಚ್‌ಗಳಲ್ಲಿಯಂತೂ ಆಫ್‌ಸೈಡ್‌ನತ್ತ ಬೌಂಡರಿ ಹೊಡೆಯುವುದೂ ದುಸ್ತರ ಎನ್ನುವ ಸ್ಥಿತಿ.

ಜೂನ್ 9ರಂದು ನ್ಯೂಯಾರ್ಕ್‌ನಲ್ಲಿ ಪಾಕಿಸ್ತಾನದ ಎದುರಿನ ಪಂದ್ಯವನ್ನೇ ಉದಾಹರಣೆಯಾಗಿ ತೆಗೆದುಕೊಳ್ಳೋಣ. ಪಾಕಿಸ್ತಾನ ಆ ಪಂದ್ಯದಲ್ಲಿ ಟಾಸ್ ಗೆದ್ದು, ಫೀಲ್ಡಿಂಗ್ ಆಯ್ದುಕೊಂಡಿತು. 119 ರನ್‌ಗಳಿಗೆ ಭಾರತ ಆಲ್‌ಔಟ್ ಆದ ಸ್ಕೋರ್ ಅನ್ನು ಐಪಿಎಲ್ ಪ್ರೇಮಿಗಳಿಗೆ ಅರಗಿಸಿಕೊಳ್ಳುವುದು ಕಷ್ಟವಿತ್ತು. 31 ಎಸೆತಗಳಲ್ಲಿ ರಿಷಭ್ ಪಂತ್ 42 ರನ್‌ಗಳನ್ನು